ಹಣಕಾಸು ನೀತಿ ಸಮಿತಿ

Posted at: 04/10/2024

ಹಣಕಾಸು ನೀತಿ ಸಮಿತಿ

ವಿಷಯ : ಭಾರತೀಯ ರಿಸರ್ವ್ ಬ್ಯಾಂಕ್ನ (ಆರ್ಬಿಐ) ಹಣಕಾಸು ನೀತಿ ಸಮಿತಿ ಸಭೆಯ(ಎಂಪಿಸಿ) ಬಾಹ್ಯ ಸದಸ್ಯರಾಗಿ ರಾಮ್ ಸಿಂಗ್, ಸೌಗತ ಭಟ್ಟಾಚಾರ್ಯ ಮತ್ತು ನಾಗೇಶ್ ಕುಮಾರ್ ಅವರನ್ನು ಕೇಂದ್ರ ಸರ್ಕಾರ ಇತ್ತೀಚೆಗೆ ನೇಮಿಸಿದೆ.

ಹಣಕಾಸು ನೀತಿ ಸಮಿತಿಯ ಬಗ್ಗೆ ತಿಳಿಯಿರಿ :

ಭಾರತ ಸರ್ಕಾರವು ನಿಗದಿಪಡಿಸಿದ ಹಣದುಬ್ಬರ ದ ಗುರಿಯನ್ನು ಸಾಧಿಸಲು ಹಣಕಾಸು ನೀತಿ ಸಮಿತಿಯು ನೀತಿ
ದರಗಳನ್ನು ನಿರ್ಧರಿಸುತ್ತದೆ.
ಭಾರತೀಯ ರಿಸರ್ವ್ ಬ್ಯಾಂಕ್ ಕಾಯಿದೆ, 1934 (ಆರ್ಬಿಐ ಕಾಯಿದೆ) ಅನ್ನು 2016 ರಲ್ಲಿ ಹಣಕಾಸು ಕಾಯಿದೆ
ಮೂಲಕ ತಿದ್ದುಪಡಿ ಮಾಡಿ ಹಣಕಾಸು ನೀತಿ ಸಮಿತಿಗೆ ಶಾಸನಬದ್ಧ ಹಾಗೂ ಸಾಂಸ್ಥಿಕ ಚೌಕಟ್ಟನ್ನು
ಒದಗಿಸಲಾಗಿದೆ.
ಈ ರೀತಿ ತಿದ್ದುಪಡಿ ಮಾಡಿದ ಆರ್ಬಿಐ ಕಾಯಿದೆ, 1934 ರ ಸೆಕ್ಷನ್ 45ZB ಅಡಿಯಲ್ಲಿ, ಕೇಂದ್ರ ಸರ್ಕಾರವು ಆರು ಸದಸ್ಯರ ಹಣಕಾಸು ನೀತಿ ಸಮಿತಿಯನ್ನು ರಚಿಸುವ ಅಧಿಕಾರವನ್ನು ಹೊಂದಿದೆ.
ಹಣಕಾಸು ನೀತಿ ಸಮಿತಿ ಗಿಂತ ಮುಂಚೆ ತಾಂತ್ರಿಕ ಸಲಹಾ ಸಮಿತಿ ಎಂಬ ಸಮಿತಿ ಅಸ್ತಿತ್ವದಲ್ಲಿತ್ತು. ಸಂಯೋಜನೆ: ಹಣಕಾಸು ನೀತಿ ಸಮಿತಿಯು ಆರು ಸದಸ್ಯರನ್ನು ಒಳಗೊಂಡಿರುತ್ತದೆ. ಅವರೆಂದರೆ ಆರ್ಬಿಐ ಗವರ್ನರ್, ಆರ್ಬಿಐ ಡೆಪ್ಯುಟಿ ಗವರ್ನರ್, ಆರ್ಬಿಐ ಮಂಡಳಿಯಿಂದ ನಾಮನಿರ್ದೇಶನಗೊಂಡ ಒಬ್ಬ ಅಧಿಕಾರಿ ಹಾಗೂ ಕೇಂದ್ರ ಸರ್ಕಾರದಿಂದ ನೇಮಕಗೊಂಡ ಬಾಹ್ಯ ಮೂರು ಸದಸ್ಯರು.
ಈ ಬಾಹ್ಯ ಸದಸ್ಯರ ಅವಧಿಯು ನಾಲ್ಕು ವರ್ಷ ದ ವರೆಗೆ ಇರಲಿದೆ.
ಸಭೆಯ ಕೋರಂ (ಹಾಜರಿರಬೇಕಾದ ಕನಿಷ್ಠ ಸದಸ್ಯರು) ನಾಲ್ಕು . ಇವರಲ್ಲಿ ಕನಿಷ್ಠ ಪಕ್ಷ ಒಬ್ಬರು ಗವರ್ನರ್ ಆಗಿರಬೇಕು. ಗವರ್ನರ್ ಅನುಪಸ್ಥಿತಿಯಲ್ಲಿ ಡೆಪ್ಯುಟಿ ಗವರ್ನರ್ ಹಾಜರಿರಬೇಕು.
ಸಾಮನ್ಯವಾಗಿ ಬಹುಮತದ ಮತದ ಆಧಾರದ ಮೇಲೆ ಹಣಕಾಸು ನೀತಿ ಸಮಿತಿ ಯು ನಿರ್ಧಾರವನ್ನು ತೆಗೆದುಕೊಳ್ಳುತ್ತದೆ. ಒಂದೊಮ್ಮೆ ಮತಗಳು ಸಮ ಸಮ ವಾದರೆ ಆರ್ಬಿಐ ಗವರ್ನರ್ ಎರಡನೇ ಬಾರಿ ಮತ ಚಲಾಯಿಸುವ ಅಧಿಕಾರ ಹೊಂದಿದ್ದಾರೆ.
ಹಣಕಾಸು ನೀತಿ ಸಮಿತಿಯ ನಿರ್ಧಾರವನ್ನು ಅನಂತರ ಆರ್ಬಿಐ ಪಾಲಿಸಲೇಬೇಕು.